# ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ

"ಜ್ಞಾನ ಸಂಗಮ" ಬೆಳಗಾವಿ – 590 018

ರಾಷ್ಟ್ರೀಯ ಸೇವಾ ಯೋಜನೆ

ಡಾ॥ ಹೆಚ್.ಎನ್. ಜಗನ್ನಾಥ ರೆಡ್ಡಿ ಬಿ.ಇ., ಎಂ.ಇ., ಪಿಹೆಚ್.ಡಿ. ದೂರವಾಣಿ ಸಂ : 0831–2405468

ಕುಲಸಚಿವರು ಫ್ಯಾಕ್ಸ ಸಂ : 0831–2405467


ಸಂ. ವಿತಾವಿ/ಬಿ.ಜಿ.ಎಮ್/ರಾ.ಸೇ.ಯೋ/2018-19/ 8166 ದಿನಾಂಕ: 10 DEC 2018

**:ಸುತ್ತೋಲೆ:**

**ವಿಷಯ:** ಮಾದಕ ವ್ಯಸನ ವಿರುದ್ಧ ಅರಿವು ನಡಿಗೆ ಕಾರ್ಯಕ್ರಮ ದಿನಾಂಕ: 15.12.2018

**ಉಲ್ಲೇಖ:** ಯುಸೇಇ/ರಾ.ಸೇಯೋ/2018–19/334 ದಿನಾಂಕ: 07/12/2018

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಇಂದು ಮಾದಕ ವ್ಯಸನವು ಯುವಜನತೆಯ ವ್ಯಕ್ತಿತ್ವವನ್ನು ನಾಶಮಾಡುತ್ತಿರುವುದು ವ್ಯಾಪಕವಾಗಿ ಕಂಡುಬರುತ್ತಿವೆ. ಮಾದಕ ದ್ರವ್ಯ ಮಾರಾಟ ಮತ್ತು ಸೇವನೆ ಬಹುದೊಡ್ಡ ಪಿಡುಗಾಗಿ ಕಾಡುತ್ತಿದೆ. ಇತ್ತೀಚೆಗೆ **ಮಾನ್ಯ ಉಪ ಮುಖ್ಯಮಂತ್ರಿಗಳಾದ ಜಿ. ಪರಮೇಶ್ವರ್‌ರವರ ಸೂಚನೆಯಂತೆ** ಗೃಹ ಇಲಾಖೆಯು ವ್ಯಾಪಕ ಕಾರ್ಯಾಚರಣೆಯನ್ನು ನಡೆಸಿದೆ. ಇದರ ತಡೆ ಕೇವಲ ಪೋಲೀಸರ ಕರ್ತವ್ಯವಾಗಿರದೆ ಸಾಮಾಜಿಕ ಕಳಕಳಿ ಇರುವ ಎಲ್ಲರೂ ಇದರ ಬಗ್ಗೆ ಅರಿವು ಮೂಡಿಸುವ ನಿಟ್ಟಿನಲ್ಲಿ ಚಿಂತಿಸಬೇಕಾಗಿದೆ. ಯುವ ಜನತೆ ಸಮಾಜ ಮತ್ತು ದೇಶದ ಆಸ್ತಿಯಾಗಿರುವುದರಿಂದ ಈ ಪಿಡುಗಿನಿಂದ ಅವರನ್ನು ರಕ್ಷಿಸಬೇಕಾಗಿದೆ.

ಮುಂದುವರೆದು, ದಿನಾಂಕ: **15.12.2018ರಂದು ಬೆಳಿಗ್ಗೆ 07.00 ಘಂಟೆಗೆ ಹೆಲ್ಪಿಂಗ್ ಹಾರ್ಟ್ಸ್ ಚಾರಿಟಬಲ್ ಟ್ರಸ್ಟ್ (ರಿ)** ಇವರ ಆಶ್ರಯದಲ್ಲಿ ಬೆಂಗಳೂರು ನಗರ ಪೋಲೀಸ್ ಮತ್ತು ರಾಷ್ಟ್ರೀಯ ಸೇವಾ ಯೋಜನೆ ಸಹಕಾರದೊಂದಿಗೆ **ಡ್ರಗ್ಸ್ ವಿರುದ್ಧ ಅರಿವು ನಡಿಗೆ** ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಈ ಕಾರ್ಯಕ್ರಮವು ಬೆಂಗಳೂರಿನ ಮಲ್ಲೇಶ್ವರಂ, ಮಾರ್ಗೋಸ ರಸ್ತೆ, ಕೆ.ಜಿ.ಜನರ್ ಹಾಸ್ಪಿಟಲ್ ಮುಂದೆ, **ಮಲ್ಲೇಶ್ವರಂ ಕ್ರೀಡಾಂಗಣದಲ್ಲಿ ಬೆಳಿಗ್ಗೆ 07.00ಘಂಟೆಗೆ** ನಡೆಯಲಿದೆ. ಇದರಲ್ಲಿ **ಬೆಂಗಳೂರು ವಿಭಾಗದ ವಿ.ತಾ.ವಿ.ಯ** ಅಧೀನಕ್ಕೆವಳಪಡುವ ಅಭಿಯಾಂತ್ರಿಕ/ತಾಂತ್ರಿಕ ಮಹಾವಿದಾಲಯಗಳಲ್ಲಿನ ರಾಷ್ಟ್ರೀಯ ಸೇವಾ ಯೋಜನೆಯ ಸ್ವಯಂ ಸೇವಕರು/ಸೇವಕಿಯರು ಮತ್ತು ಕಾರ್ಯಕ್ರಮಾಧಿಕಾರಿಗಳು ಗರಿಷ್ಠ ಸಂಖ್ಯೆಯಲ್ಲಿ ಭಾಗವಹಿಸಲು ಕೋರಲಾಗಿದೆ. ಈ ನಡಿಗೆಯಲ್ಲಿ ಬೆಂಗಳೂರು ನಗರದ ಪೋಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗಳು ಭಾಗವಹಿಸಲಿದ್ದಾರೆ. ರಾ.ಸೇಯೋ ಕಾರ್ಯಕ್ರಮಾಧಿಕಾರಿಗಳು ಸ್ವತಃ ಹೆಚ್ಚಿನ ಆಸಕ್ತಿವಹಿಸಿ ಈ ಮಾನವೀಯ ಕಾರ್ಯದಲ್ಲಿ ಗರಿಷ್ಠ ಸಂಖ್ಯೆಯಲ್ಲಿ ವಿದ್ಯಾರ್ಥಿಗಳೊಂದಿಗೆ ಈ ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ಕ್ರಮಕೈಗೊಳ್ಳಲು ತಮ್ಮನ್ನು ಕೋರಲಾಗಿದೆ..

ಭಾಗವಹಿಸುವ ಸ್ವಯಂ ಸೇವಕರು/ಸೇವಕಿಯರಿಗೆ ಟಿ–ಶರ್ಟ್, ಉಪಹಾರ ಮತ್ತು ಪ್ರಮಾಣ ಪತ್ರವನ್ನು ನೀಡಲಾಗುವದು. ಹೆಚ್ಚಿನ ವಿವರಗಳಿಗೆ ಅದಿತಿ, ಮೊಬೈಲ್ ಸಂಖ್ಯೆ: 96865 39999 ಇವರನ್ನು ಸಂಪರ್ಕಿಸಲು ಕೋರಲಾಗಿದೆ.

ವಂದನೆಗಳೊಂದಿಗೆ.

10/12/18

**ಕುಲಸಚಿವರು**

**ಇವರಿಗೆ,**

ಪ್ರಾಂಶುಪಾಲರು ಮತ್ತು ಸಂಯೋಜನಾಧಿಕಾರಿಗಳು, ವಿ.ತಾ.ವಿ. ಅಧಿನಕ್ಕೊಳಪಡುವ ಸಂಬಂದಪಟ್ಟ ಎಲ್ಲಾ ಅಭಿಯಾಂತ್ರಿಕ/ತಾಂತ್ರಿಕ ಮಹಾವಿದ್ಯಾಲಯಗಳು, ಬೆಂಗಳೂರು ವಿಭಾಗ.

**ಪ್ರತಿಯನ್ನು ಮಾಹಿತಿಗಾಗಿ:**

1. ಮಾನ್ಯ ಕುಲಪತಿಗಳು, ವಿ.ತಾ.ವಿ., ಬೆಳಗಾವಿ ಇವರಿಗೆ ಕುಲಪತಿಗಳ ಕಾರ್ಯದರ್ಶಿಗಳ ಮುಖಾಂತರ.
2. ರಾಜ್ಯ ಎನ್.ಎಸ್.ಎಸ್. ಅಧಿಕಾರಿಗಳು ರಾ.ಸೇ.ಯೋ. ಕೋಶ, ಯುಸೇಇ, ಬೆಂಗಳೂರು.
3. ವಿಶೇಷಾಧಿಕಾರಿಗಳು, ಸಿ.ಎನ್.ಸಿ ವಿಭಾಗ, ವಿತಾವಿ., ಬೆಳಗಾವಿ, ಇವರಿಗೆ ಸದರಿ ಸುತ್ತೋಲೆಯನ್ನು ವಿ.ತಾ.ವಿ.ಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಚಿಸಲಾಗಿದೆ.
4. ಕಛೇರಿ ಕಡತಕ್ಕೆ.